






(6ನೇ ಪುಟದಿಂದ)

ಮಹಿಳೆಯರು ಬಣ್ಣದ ರಂಗೋಲಿಯನ್ನು ಹಾಕಲು ಆರಂಭಿಸಿದರು. ಕಾಲಕ್ರಮೇಣ ಇದು ಆ ಗಲ್ಲಿಯ ಎಲ್ಲರ ಮನೆಯ ಒಂದು ವಿಶಿಷ್ಟ ಆಚರಣೆಯಾಗಿ ಪಕ್ಕದ ಬ್ರಾಹ್ಮಣರ ಗಲ್ಲಿ ಮತ್ತು ಹೈ ಚರ್ಚ್ ರಸ್ತೆಗೂ ಹಬ್ಬಿಕೊಂಡಿತು. ಈಗದು ಬಹುದೊಡ್ಡ ಸಾಂಸ್ಕೃತಿಕ ಆಯಾಮವಾಗಿ ಬೆಳೆದಿದೆ.

ಆರಂಭದಲ್ಲಿ ಮನೆಯ ಮಹಿಳೆಯರಿಗಷ್ಟೇ ಮೀಸಲಾಗಿದ್ದ ಈ ರಂಗೋಲಿ ಕಲೆಗೆ ಈಗ ದೊಡ್ಡ ಮಟ್ಟದ ಸ್ಪರ್ಧೆಯೇ ನಡೆಯುತ್ತದೆ. ಆಕರ್ಷಕ ಬಹುಮಾನಗಳನ್ನೂ ನೀಡುತ್ತಾರೆ. ಮನೆಯ ಮುಂದಿನ ಟಾರ್ ರಸ್ತೆಯಲ್ಲೆ ಬಿಡಿಸುವ ಈ ರಂಗೋಲಿಗಳು ಎಷ್ಟು ನೈಜವಾಗಿರುತ್ತವೆಯೆಂದರೆ ಕಾನ್ವಾಸ್‌ನಲ್ಲಿ ಬಿಡಿಸಿದ ಚಿತ್ರಗಳನ್ನೂ ಮೀರಿಸುತ್ತವೆ.

ಪೌರಾಣಿಕ, ಐತಿಹಾಸಿಕ ಘಟನೆಗಳು, ರಾಜಕೀಯ ನಾಯಕರು , ಸಿನಿಮಾ ತಾರೆಯರು, ವರ್ಷದ ವ್ಯಕ್ತಿಗಳು ಎಲ್ಲವೂ ಇಲ್ಲಿನ ರಂಗೋಲಿ ಸ್ಪರ್ದೇಯ ಪ್ರಮುಖ ವಸ್ತುವಾಗುವುದು ವಿಶೇಷ. ಜಾತ್ರೆಯ ದಿನ ಭಕ್ತಿಯಲ್ಲಿ ಮಿಂದೇಳುವ ಭಕ್ತಾದಿಗಳು, ನಂತರ ರಸ್ತೆಯ ಇಕ್ಕೆಲದಲ್ಲಿ ಬಿಡಿಸಿದ ರಂಗೋಲಿಯ ಕಲಾರಾಧನೆಯಲ್ಲಿ ತೊಡಗುತ್ತಾರೆ. ಸಾಯಂಕಾಲ ಆರಂಭವಾಗುವ ಈ ಪ್ರದರ್ಶನವು ಮಧ್ಯರಾತ್ರಿಯವರೆಗೂ ಮುಂದುವರೆಯುತ್ತದೆ.

ಜನವರಿ 8 ರಂದು ಈ ಜಾತ್ರೆ ಶುರುವಾಗುತ್ತದೆ. ದೈವಾರಾಧನೆಯ ಜೊತೆಗೆ ಕಲಾರಾಧನೆಯೂ ಮಿಳಿತವಾಗಿರುವ ಈ ಜಾತ್ರೆ ಅತ್ಯಂತ ವಿಶಿಷ್ಟ.